# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 714 |
| ಸದಸ್ಯರ ಹೆಸರು | : | ಶ್ರೀ ಹೆಚ್. ಎಸ್ . ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12.12.2025. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕ್ ಪಂಚಾಯತ್ ಚುನಾವಣೆಗಳನ್ನು ಯಾವಾಗ ನಡೆಸಲು ತೀರ್ಮಾನಿಸಲಾಗಿದೆ; ಚುನಾವಣೆಗಳನ್ನು ನಡೆಸಲು ವಿಳಂಭವಾಗುತ್ತಿರುವುದಕ್ಕೆ ಕಾರಣಗಳೇನು: (ವಿವರ ನೀಡುವುದು) | 1. ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಅವಧಿಯು ಜೂನ್ 2021ಕ್ಕೆ ಮುಕ್ತಾಯಗೊಂಡಿರುತ್ತದೆ. ಅವಧಿಯು ಮುಗಿದ ನಂತರ ಚುನಾವಣೆಯನ್ನು ನಡೆಸುವ ಸಿದ್ಧತೆಯಲ್ಲಿದ್ದಾಗ ರಾಜ್ಯದಲ್ಲಿ ಕೋವಿಡ್ ಸಾಂಕ್ರಾಮಿಕ ರೋಗ ಹಿನ್ನೆಲೆಯಲ್ಲಿ ಚುನಾವಣೆ ನಡೆಸಲು ಸಾಧ್ಯವಾಗಲಿಲ್ಲ.<br>2. ತದನಂತರ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ಕ್ಕೆ ತಿದ್ದುಪಡಿ ತಂದು ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವನ್ನು ರಚಿಸಲಾಗಿತ್ತು. ಆಯೋಗವು ನೀಡಿದ ಶಿಫಾರಸ್ಸಿನಂತೆ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯ ಸೀಮಾ ಗಡಿಯನ್ನು ಗುರುತಿಸಿ ಅಧಿಸೂಚಿಸಲಾಗಿತ್ತು.<br>3. ನಗರಾಭಿವೃದ್ಧಿ ಇಲಾಖೆಯು ಸೆಪ್ಟೆಂಬರ್-ಅಕ್ಟೋಬರ್ -2025ರಲ್ಲಿ ಕೆಲವು ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿ / ಪುರಸಭೆ / ನಗರ ಸಭೆಗಳಾಗಿ ಪರಿವರ್ತನೆ ಮಾಡಿ ಅಧಿಸೂಚನೆ ಹೊರಡಿಸಿದ್ದರಿಂದ 07 ಜಿಲ್ಲೆಗಳು ಮತ್ತು 08 ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗಳ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಯಿಂದ ಕೈ ಬಿಡಲು ಅಧಿಸೂಚನೆ ಹೊರಡಿಸಿ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳ ಸೀಮಾ/ ಗಡಿಯನ್ನು ಗುರುತಿಸಿ ದಿನಾಂಕ:09.12.2025 ರಂದು ಅಧಿಸೂಚಿಸಲಾಗಿದೆ.<br>4. ಮೇಲಿನ ಎಲ್ಲಾ ವಿವರಗಳ ಮಾಹಿತಿಯೊಂದಿಗೆ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಸುವುದಕ್ಕೆ ಸಂಬಂಧಿಸಿದಂತೆ ಸಚಿವ ಸಂಪುಟದ ಆದ್ಯ ಗಮನಕ್ಕೆ ತರಲಾಗಿದೆ.<br>5. ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳಿಗೆ ಸಂಬಂಧಿಸಿದಂತೆ ಮೀಸಲಾತಿ ಅಧಿಸೂಚನೆ ರಾಜ್ಯ ಚುನಾವಣಾ ಆಯೋಗಕ್ಕೆ ಒದಗಿಸುವಂತೆ ಸರ್ಕಾರದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಂಗ ನಿಂದನಾ ಅರ್ಜಿ ಸಂಖ್ಯೆ (CCC No).534/2024ನ್ನು ದಾಖಲಿಸಿದ್ದು, |

| | | |
|---|---|---|
| | | ಪ್ರಕರಣವು ದಿನಾಂಕ:12.12.2025 ರಂದು ವಿಚಾರಣೆಗೆ ಬಂದಿದ್ದು ಮಾನ್ಯ ಅಡ್ವೋಕೇಟ್ ಜನರಲ್ ರವರ ಮನವಿ ಮೇರೆಗೆ ಮುಂದಿನ ವಿಚಾರಣೆಯನ್ನು ದಿನಾಂಕ:30.01.2026ಕ್ಕೆ ನಿಗದಿಪಡಿಸಿರುತ್ತದೆ.<br>6. ಈಗಾಗಲೇ 31 ಜಿಲ್ಲಾ ಪಂಚಾಯಿತಿಗಳು ಮತ್ತು 239 ತಾಲ್ಲೂಕು ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಕರಡು ಮೀಸಲಾತಿಯನ್ನು ಸಿದ್ಧಪಡಿಸಲು ಇಲಾಖಾ ಹಂತದಲ್ಲಿ ಕ್ರಮ ಕೈಗೊಳ್ಳಲಾಗಿದೆ.<br>7. ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಿಗೆ ಸರ್ಕಾರವು ಅಂತಿಮ ಮೀಸಲಾತಿಯನ್ನು ಅಧಿಸೂಚಿಸಿ ರಾಜ್ಯ ಚುನಾವಣಾ ಆಯೋಗಕ್ಕೆ ಒದಗಿಸಿದ ನಂತರ ರಾಜ್ಯ ಚುನಾವಣಾ ಆಯೋಗವು ಚುನಾವಣೆ ನಡೆಸಲು ಕ್ರಮ ಕೈಗೊಳ್ಳಬೇಕಿದೆ. |
| (ಆ) | ಬೆಂಗಳೂರು ನಗರ ಜಿಲ್ಲೆ ಮತ್ತು ರಾಜ್ಯದಲ್ಲಿ ತಾಲ್ಲೂಕು ಪಂಚಾಯಿತಿಗಳಿಗೆ ಸ್ವಂತ ಕಟ್ಟಡಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: (ವಿವರ ನೀಡುವುದು) | ಬಂದಿದೆ.<br>ಸ್ವಂತ ಕಟ್ಟಡಗಳಿಲ್ಲದ ತಾಲ್ಲೂಕು ಪಂಚಾಯಿತಿ ವಿವರವನ್ನು ಅನುಬಂಧದಲ್ಲಿ ನೀಡಿದೆ. |
| (ಇ) | ಜಿಲ್ಲಾ ಪಂಚಾಯಿತಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆಯೇ: (ವಿವರ ನೀಡುವುದು) | ಜಿಲ್ಲಾ ಪಂಚಾಯತಿಗಳಿಗೆ ಕನಿಷ್ಠ ರೂ.4.00 ಕೋಟಿಗಳಿಂದ ಗರಿಷ್ಠ ರೂ 8.00 ಕೋಟಿಗಳವರೆಗೆ ರಾಜ್ಯ ಹಣಕಾಸು ಆಯೋಗದ ಅನಿರ್ಬಂಧಿತ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಸದರಿ ಅನುದಾನದಲ್ಲಿ ಮಾರ್ಗಸೂಚಿಗಳಂತೆ ಕ್ರಿಯಾ ಯೋಜನೆ ತಯಾರಿಸಿ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ |
| (ಈ) | ಈವರೆಗೂ ಬೆಂಗಳೂರು ನಗರ ಪಂಚಾಯಿತಿಗಳಿಗೆ ಸರ್ಕಾರ ಎಷ್ಟು ಅನುದಾನವನ್ನು ಬಿಡುಗಡೆ ಮಾಡಿ, ಕಾಮಗಾರಿ ಕೈಗೊಂಡಿದೆ? (ವಿವರ ನಿಡುವುದು) | (see table below) |

| **ಯೋಜನೆ** | **2025-26ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ (ರೂ.ಗಳಲ್ಲಿ)** |
|---|---|
| ಜಿಲ್ಲಾ ಪಂಚಾಯತಿ ರಾಜ್ಯ ಹಣಕಾಸು ಆಯೋಗದ ಅಭಿವೃದ್ಧಿ ಅನುದಾನ | 2,56,40,398 |
| ತಾಲ್ಲೂಕು ಪಂಚಾಯತಿ ರಾಜ್ಯ ಹಣಕಾಸು ಆಯೋಗದ ಅಭಿವೃದ್ಧಿ ಅನುದಾನ | 5,76,03,360 |
| ಪಂಚಾಯತ್ ರಾಜ್ ಸಂಸ್ಥೆಗಳ ಕಛೇರಿ ಕಟ್ಟಡ ನಿರ್ಮಾಣ (ಲೆ.ಶೀ:2515) | 52,50,000 |
| ಗ್ರಾಮ ಪಂಚಾಯಿತಿಗಳಿಗೆ 15ನೇ ಹಣಕಾಸು ಆಯೋಗದ ಅನುದಾನ | 40,46,99,470 |

ಸಂಖ್ಯೆ: ಗ್ರಾಅಪ 940 ಗ್ರಾಪಂಅ 2025

(ಪ್ರಿಯಾಂಕ್ ಖರ್ಗೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

## ಅನುಬಂಧ

| ಸ್ವಂತ ಕಟ್ಟಡಗಳಿಲ್ಲದ ತಾಲ್ಲೂಕು ಪಂಚಾಯಿತಿಗಳ ವಿವರ | | | |
|---|---|---|---|
| ಕ್ರ. ಸಂ | ಜಿಲ್ಲೆ | ಕ್ರ. ಸಂ | ಸ್ವಂತ ಕಟ್ಟಡಗಳಿಲ್ಲದ ತಾಲ್ಲೂಕು ಪಂಚಾಯಿತಿ ಹೆಸರು |
| 1 | ಬಾಗಲಕೋಟೆ | 1 | ಗುಳೇದಗುಡ್ಡ |
| | | 2 | ಇಲಕಲ್ಲ |
| | | 3 | ರಬಕವಿ-ಬನಹಟ್ಟಿ |
| 2 | ಬಳ್ಳಾರಿ | 4 | ಕುರುಗೋಡು |
| | | 5 | ಕಂಪ್ಲಿ |
| 3 | ಬೆಳಗಾವಿ | 6 | ಕಾಗವಾಡ |
| | | 7 | ಕಿತ್ತೂರ |
| | | 8 | ಮೂಡಲಗಿ |
| | | 9 | ನಿಪ್ಪಾಣಿ |
| | | 10 | ಯರಗಟ್ಟಿ |
| 4 | ಬೀದರ್ | 11 | ಚಿಟಗುಪ್ಪಾ |
| | | 12 | ಕಮಲನಗರ |
| | | 13 | ಹುಲಸೂರ |
| 5 | ಚಾಮರಾಜನಗರ | 14 | ಹನೂರು |
| 6 | ಚಿಕ್ಕಮಗಳೂರು | 15 | ಕಳಸ |
| | | 16 | ಅಜ್ಜಂಪುರ |
| 7 | ಚಿಕ್ಕಬಳ್ಳಾಪುರ | 17 | ಚೇಳೂರು |
| | | 18 | ಮಂಚೇನಹಳ್ಳಿ |
| 8 | ಚಿತ್ರದುರ್ಗ | 19 | ಹೊಳಲ್ಕೆರೆ |
| 9 | ದಕ್ಷಿಣ ಕನ್ನಡ | 20 | ಮುಲ್ಕಿ |
| | | 21 | ಉಳ್ಳಾಲ |
| 10 | ದಾವಣಗೆರೆ | 22 | ನ್ಯಾಮತಿ |
| 11 | ಧಾರವಾಡ | 23 | ಅಳ್ನಾವರ |
| 12 | ಗದಗ | 24 | ಗಜೇಂದ್ರಗಡ |
| | | 25 | ಲಕ್ಷ್ಮೇಶ್ವರ |
| 13 | ಹಾವೇರಿ | 26 | ರಟ್ಟಿಹಳ್ಳಿ |
| 14 | ಕಲಬುರಗಿ | 27 | ಕಾಳಗಿ |
| | | 28 | ಕಮಲಾಪೂರ |
| | | 29 | ಶಹಾಬಾದ |
| | | 30 | ಯಡ್ರಾಮಿ |

| | | | |
|---|---|---|---|
| 15 | ಕೊಡಗು | 31 | ವಿರಾಜಪೇಟೆ |
| | | 32 | ಕುಶಾಲನಗರ |
| 16 | ಕೊಪ್ಪಳ | 33 | ಕಾರಟಗಿ |
| | | 34 | ಕನಕಗಿರಿ |
| | | 35 | ಕುಕನೂರು |
| 17 | ಮೈಸೂರು | 36 | ಸಾಲಿಗ್ರಾಮ |
| | | 37 | ಸರಗೂರು |
| 18 | ರಾಯಚೂರು | 38 | ಸಿರವಾರ |
| | | 39 | ಮಸ್ಕಿ |
| 19 | ರಾಮನಗರ | 40 | ಹಾರೊಹಳ್ಳಿ |
| 20 | ಉಡುಪಿ | 41 | ಬ್ರಹ್ಮಾವರ |
| | | 42 | ಬೈಂದೂರು |
| | | 43 | ಹೆಬ್ರಿ |
| | | 44 | ಕಾಪು |
| 21 | ಉತ್ತರ ಕನ್ನಡ | 45 | ದಾಂಡೇಲಿ |
| 22 | ವಿಜಯನಗರ | 46 | ಕೊಟ್ಟೂರು |
| 23 | ವಿಜಯಪುರ | 47 | ಆಲಮೇಲ |
| | | 48 | ದೇವರ ಹಿಪ್ಪರಗಿ |
| | | 49 | ಚಡಚಣ |
| | | 50 | ನಿಡಗುಂದಿ |
| | | 51 | ಕೊಲ್ಹಾರ |
| | | 52 | ಬಬಲೇಶ್ವರ |
| | | 53 | ತಿಕೋಟಾ |
| | | 54 | ತಾಳಿಕೋಟೆ |
| 24 | ಯಾದಗಿರಿ | 55 | ವಡಗೇರ |
| | | 56 | ಹುಣಸಗಿ |
| | | 57 | ಗುರುಮಿಠಕಲ್ |